ಅವರ ಕುರಿತು ತೀರಾ ವಿಶ್ವಾಸವೇನಿರಲಿಲ್ಲ. ಬೇಕಲ್ಲ ಕೆಲಸಕ್ಕೆ ಜನ? ನಿಧನಿಧಾನಕ್ಕೆ ಗಂಡನ ಅಂತರಂಗವನ್ನು ಅರ್ಥೈಸಿಕೊಂಡಿದ್ದಳು ಸೀತಾಲಕ್ಷ್ಮಿ. ಸಾಧ್ಯವಾದಷ್ಟು ಅವನನ್ನು ಅನುಸರಿಸಿಕೊಂಡು ಹೋಗುತ್ತಿದ್ದಳು. ಆದರೂ ಎಲ್ಲೋ, ಏನೋ ತಪ್ಪಾಗಿಬಿಡುತ್ತಿತ್ತು. ಮಂತ್ರಪುಷ್ಪ ಉದುರುತ್ತಿತ್ತು.

***

ವೆಂಕಟರಾಮುವಿನ ಮದುವೆಯಾಗಿ ಮೂರು ತಿಂಗಳು ಕಳೆದಿತ್ತು. ಆರು ತಿಂಗಳ ಗರ್ಭಿಣಿ ಸೀತಾಲಕ್ಷ್ಮಿ. 'ಬಾಣಂತನದ ಹೆಳೇಲಿ ತೌರಿಗೆ ಎದ್ಬಿಡ್ತೀಯಲ್ಲೇ. ಆಮೇಲೆ ಬರೋಕೆ ಏಳು ತಿಂಗಳೋ, ಎಂಟು ತಿಂಗಳೋ. ಹೊಸ ಮದುವಣಗಿತ್ತಿ ನಿನ್ಹಂಗಲ್ಲ, ನಾಜೂಕು. ತಾನು ತನ್ನ ಗಂಡ ಇಷ್ಟಾದ್ರೆ ಮುಗೀತು. ಅವಳು ಕೊಟ್ಟಿಗೆ ಕೆಲಸ ಮಾಡ್ತಾಳೆ ಅಂತ ನಂಗಂತೂ ನಂಬಿಕೆ ಇಲ್ಲ. ಪಾಪ, ಅಮ್ಮಂಗೆ ಕಷ್ಟ...' ಅಂದಿದ್ದಳು ಕಮಲಾ, ಅದೊಂದು ದಿನ.

'ಅದ್ಯಾಕೆ ಹಂಗಂತೀರಿ ಅತ್ಗೆ? ನೀವಿಲ್ವಾ? ಮೂರು ಮೂರು ಜನ ಹೆಂಗಸ್ರು ಮನೇಲಿ ಇರ್ತೀರಪ್ಪಾ...'

'ಸಸಿನೆಟ್ಟಿ, ಕೊಳೆರೋಗ, ಅಡಿಕೆಕೊಯ್ಲು, ಗದ್ದೆ ಕುಯ್ಲು ಅಂತ ಸಾಲು ಸಾಲಾಗಿ ಶುರುವಾಗುತ್ತಲ್ಲೇ ಮಾರಾಯ್ತೀ. ಡಜನ್ನುಗಟ್ಲೆ ಜನಕ್ಕೆ ಮಾಡಿ ಎಳೀಬೇಕಲ್ಲ? ಈಗ್ಲೇ ಅಮ್ಮ ಲಾಚಾರಾಗಿದಾಳೆ. ನೀನು ಬರೋವರೆಗೆ ಹೆಂಗೆ ಕಾಲ ಹಾಕ್ತಾಳೋ...'

'ಪದೇ ಪದೇ ಅದನ್ನೇ ಯಾಕೆ ಉರು ಹಾಕ್ತೀರಿ? ಚೂರು ಕಷ್ಟ ಆಗುತ್ತೆ ಹೌದು. ಆದ್ರೆ ಬಾವ ಇದಾರಲ್ಲ? ಕನಕಂಗೆ ಕೆಲಸಕ್ಕೆ ಮೈ ಬಗ್ಗದಿದ್ದರೂ ಅವರು ಸಹಾಯ ಮಾಡ್ತಾರೆ..'

'ಯಾರಿಗ್ಗೊತ್ತು? ಹೆಂಡ್ತಿ ಬಂದ್ಮೇಲೆ ಅವನು ಮೊದಲಿನ ಹಂಗಿಲ್ಲ ಕಣೇ. ಏನೇನು ಕಿಮಿ ಚುಚ್ತಾಳೋ?'

'ಕೇಳ್ಲಿ ಬಿಡಿ. ಹೆಂಡತಿ ಮಾತು ಕೇಳಿದ್ರೆ ಕೈಂಯಾಗಲ್ಲ'

'ಆದ್ರೂ.., ನಂಗ್ಯಾಕೋ ಕೈಕಾಲಲ್ಲಿ ನಡುಕ ಹತ್ಗೊಂಡಿದೆ...'

'ನೀವೊಬ್ರು. ಯಾರಾರೂ ಇಲ್ದಿದ್ರೆ ಪ್ರಪಂಚ ಮುಳುಗಿಹೋಗುತ್ತೆ ಅನ್ನೋದು ಹಸೀ ಸುಳ್ಳು. ಅದರಷ್ಟಕ್ಕೆ ಅದು ನಡ್ಕಂಡು ಹೋಗುತ್ತೆ. ಆಮೇಲಾಮೇಲೆ ಅಭ್ಯಾಸಾನೂ ಆಗುತ್ತೆ...' ಭಾರೀ ತಿಳಿವಳಿಕಸ್ಥೆಯಂತೆ ಮಾತಾಡಿದ್ದಳು ಅಮಾಯಕ ಹುಡುಗಿ.

'ಏನೋಪ್ಪ' ಉದ್ದಕ್ಕೆ ಉಸಿರು ಬಿಟ್ಟಿದ್ದಳು ಕಮಲಾ, 'ಮಗ ಏನಂತಾನೇ?' ಮಾತು ಬದಲಾಯಿಸಿದ್ದಳು.

'ಮಗ ಅಂತ್ಲೇ ನಂಬ್ಕಂಬಿಟ್ಟಿದೀರಾ?' ಕೌತುಕದಿಂದ ಕೇಳಿದ್ದಳು ಸೀತಾಲಕ್ಷ್ಮಿ.

'ಹಂಗನ್ಸುತ್ತಪ್ಪಾ...'

ಸಂತೋಷವಾಗಿತ್ತು ಸೀತಾಲಕ್ಷ್ಮಿಗೆ, ಅತ್ತಿಗೆಯ ಬಾಯಿ ಹರಕೆಯಿಂದ ಗಂಡು ಮಗು ಹುಟ್ಟಿಬಿಟ್ಟರೆ ಈ ಮನೆಗೆ ಚೊಚ್ಚಲ ವಂಶೋದ್ಧಾರಕನನ್ನು ಕೊಟ್ಟ ಹೆಮ್ಮೆ ತನಗೆ. 'ತಲೇಮೇಲೆ ಕೋಡು ಬಂದಿದೆಯೇನೇ? ಬೆಳಚಿ ನೋಡ್ಲಾ?' ಅಣ್ಣಂದಿರು ಕೀಟಲೆ ಮಾತಾಡಿದಂತಾಗಿ ಮೈಯಲ್ಲಿ ಪುಳಕ.

## ಕಳೆದ ಸಂಚಿಕೆಯಲ್ಲಿ



ಮನೆಗೆ ಬಂದ ನವವಧು ಸಡಗರವನ್ನಷ್ಟೇ ತರಲಿಲ್ಲ, ಮನೆಯ ಹೆಣ್ಣುಮಕ್ಕಳು ಮೂಗಿನ ಮೇಲೆ ಬೆರಳಿಟ್ಟುಕೊಳ್ಳುವಂತೆಯೂ ನಡೆದು ಕೊಳ್ಳತೊಡಗಿದಳು. ತನ್ನ ವಾರಗಿತ್ತಿ ಹಾಗೂ ಮೈದುನ ನಡೆದುಕೊಳ್ಳುತ್ತಿದ್ದ ರೀತಿ, ಎಗ್ಗಿಲ್ಲದೆ ನಡೆಸುತ್ತಿದ್ದ ಸಲ್ಲಾಪ ಸೀತಾಲಕ್ಷ್ಮಿಗೆ ಕ್ರಾಂತಿಯಂತೆ ಕಾಣಿಸತೊಡಗಿತು. ಹೊಸ ಸೊಸೆ ಉಳ್ಳವರ ಮನೆಯವಳೆಂದು ಮನೆಯಲ್ಲಿ ಯಾರೂ ಕೆಲಸ ಹೇಳುತ್ತಿರಲಿಲ್ಲ. ನವವಧುವಿಗೆ ಕೆಲಸ ಕಲಿತುಕೊಳ್ಳುವ ಉತ್ಸಾಹವೂ ಇರಲಿಲ್ಲ. ಕನಕಳ ಮಿತಿ ನಡವಳಿಕೆ ಹಾಗೂ ಪತ್ನಿಗೆ ಸದರ ಕೊಟ್ಟಿರುವ ತಮ್ಮನ ಮೇಲೆ ಶಿವರಾಮ ಸಿಡುಕತೊಡಗಿದ. ಅದರ ಬಿಸಿ ತಾಕತೊಡಗಿದ್ದು ಸೀತಾಲಕ್ಷ್ಮಿಗೆ. ಮುಟ್ಟು ನಿಂತು ಗರ್ಭವತಿಯಾದ ಮೇಲೆ ಸೀತಾಲಕ್ಷ್ಮಿಗೆ ಮನೆಯಲ್ಲಿ ವಿಶೇಷ ಉಪಚಾರ ದೊರೆಯತೊಡಗಿತು. ಆ ಸಂದರ್ಭದಲ್ಲೂ ಗಂಡನ ಮುನಿಸೇನೂ ಕಡಿಮೆಯಾಗಲಿಲ್ಲ. ತನಗೆ ದೊರೆತಿರುವ ಸುಖ ಕಮಲಾಳಿಗೆ ಎಂದೂ ದೊರೆಯದೆನ್ನಿಸಿ, ಸೀತಾಲಕ್ಷ್ಮಿಗೆ ಬೇಸರವೆನ್ನಿಸಿತು. ಅದೊಂದು ದಿನ ನಡೆಯಬಾರದ ಘಟನೆ ನಡೆದುಹೋಯಿತು. ಬೆಳಗ್ಗೆ ಮನೆಮಂದಿಯೆಲ್ಲ ಎದ್ದು ನೋಡಿದರೆ ಕಮಲಳ ಸುಳಿವೇ ಇಲ್ಲ.

'ಅಪುತ್ರಸ್ಯ ಗತಿರ್ನಾಸ್ತಿ' ಎನ್ನುವ ನಂಬಿಕೆಗೆ ಜೋತು ಬಿದ್ದು ಗಂಡುಮಕ್ಕಳಿಗಾಗಿ ಹಪಹಪಿಸುತ್ತಿದ್ದ ಕಾಲ. ಈ ಹಪಹಪಿ ಎಷ್ಟಿತ್ತು ಅಂದರೆ, ಸಾಲಿಗೆ ಹೆಣ್ಣು ಹೆರುವ ಹೆಂಡತಿಯನ್ನು ಮೂಲೆಗೆ ಕೂರಿಸಿ ಮತ್ತೊಂದು ಮದುವೆ ಮಾಡಿಕೊಂಡು ಅದೃಷ್ಟಪರೀಕ್ಷೆ ಮಾಡಿಕೊಳ್ಳುವ ಗಂಡಸರಿಗೆ ಬರಗಾಲ ಇರಲಿಲ್ಲ. ಅದ್ಯಾಕೆ ಈ ಸಮಯದಲ್ಲಿ ಇಂಥ ಯೋಚನೆ ತಲೆಗೆ ಬಂತೋ ಎಂದು ಸೀತಾಲಕ್ಷ್ಮಿ ಹೌಹಾರಿದಳು. ಸಾಲಿಗೆ ಹೆಣ್ಣು ಹೆತ್ತರೆ ಗಂಡ ತನ್ನನ್ನು ದೂರ ಮಾಡುತ್ತಾರಾ? ಇನ್ನೊಂದು ಮದುವೆ? ನಂಬುವಂತಿಲ್ಲ ಗಂಡಸರನ್ನು. ಶಿವರಾಮನಂಥವರಿಗೆ ಯಾರ ಅಂಜಿಕೆ ಕೂಡಾ ಇಲ್ಲ. ಯಾರನ್ನು ಬೇಕಾದರೂ ಬೈದು ಮೂಲೆಯಲ್ಲಿ ಕೂರಿಸಿ ಬಿಡುತ್ತಾನೆ. 'ಹೆಣ್ಣು ಕುದುರೆಗಳು' ಎಂದು ಎಷ್ಟು ಸಸಾರ ಮಾಡುತ್ತಾರೆ ಜನ. ನಾಕು ದಿನ ಹೆಂಗಸರು ಮನೆಯಲ್ಲಿಲ್ಲ ಅಂದರೆ ಅವರದ್ದು ನಾಯಿಪಾಡು. ಕೈ ಸುಟ್ಟುಕೊಂಡು, ಕಣ್ಣುರಿಸಿಕೊಂಡು ಅಡುಗೆ ಮಾಡುವುದು ಎಷ್ಟೋ ಜನಕ್ಕೆ ಗೊತ್ತೇ ಇಲ್ಲ. ವೆಂಕಟರಾಮುವಂಥ ಅಪರೂಪದವರಲ್ಲಿ ಅಪರೂಪದವರನ್ನು ಬಿಟ್ಟರೆ ಯಾರೂ ಅಡುಗೆಮನೆ ಕಡೆ ಹಣಿಕಿ ನೋಡುವುದಿಲ್ಲ. ಹದ ಹೇಳದೆ ಉಂಡು ಹೋದರೆ ಅದೇ ಸೌಭಾಗ್ಯ. ವೆಂಕಟರಾಮನಿಗೂ, ಶಿವರಾಮನಿಗೂ ಹೋಲಿಕೆ ಮಾಡಿದ ಮನಸ್ಸು ಕನಕನ ಕಡೆ ದಿಕ್ಕು ಬದಲಿಸಿತು.

'ಅತ್ತೇ, ನೀವು ಏಳಿ. ಇವರಿಗೆ ನಾನೇ ರೊಟ್ಟಿ ಮಾಡ್ಕೊಡ್ತೀನಿ...' ಎಷ್ಟು ಸಲೀಸಾಗಿ ಗಂಡನ ನಿಗಾ ವಹಿಸಲು ನಿಂತುಬಿಟ್ಟಳು. ಅಥವಾ ತನ್ನ ಗಂಡನ ಬೇಕುಬೇಡಗಳನ್ನು ಗಮನಿಸಲು ತಾನಿದ್ದೇನೆ, ಅದು ತನ್ನ ಹಕ್ಕು ಎಂದು ಪರೋಕ್ಷವಾಗಿ ಮನವರಿಕೆ ಮಾಡಿಸಿಬಿಟ್ಟಳು. ಗಂಡಹೆಂಡಿರು ಚಕ್ಕಂದವಾಡುತ್ತಾ ತಿಂಡಿಯ ಕಲಾಪ ನಡೆಸುವಾಗ ತಾವು ಅಲ್ಲಿರಬಾರದೆಂದು ಲೋಕಜ್ಞಾನ ಬಲ್ಲ ಮನೆಯವರು ಅರ್ಥೈಸಿಕೊಂಡುಬಿಟ್ಟಿದ್ದಾರೆ. ತಿಂಡಿಯ ಹೊತ್ತಿಗೆ ಉಳಿದ ಹೆಂಗಸರು ಹೊರಹೊರಗೆ ಸುಳಿದಾಡಿಕೊಂಡಿರುವುದು ಶಿವರಾಮನ ಗಮನಕ್ಕೆ ಬಂದರೆ ಅವನು ಹೇಳೇ ಹೇಳುತ್ತಾನೆ,

'ಓ, ಸಿನಿಮಾ ಶುರುವಾಯ್ತೂಂತ ಕಾಣುತ್ತೆ...'

'ಸುಮ್ನಿರಿ ಮಾರಾಯ್ರಾ, ತಮಾಷಿ ಮಾಡ್ಬೇಡಿ...' ಮದುವೆಯಾಗಿ ವರ್ಷ ಕಳೆದ ಮೇಲೆ ಇಷ್ಟು ಮಾತಾಡಲು ಕಲಿತಿದ್ದಾಳೆ ಸೀತಾಲಕ್ಷ್ಮಿ. 'ನಗೆ ಹೋಗಿ ಹೊಗೆ ಆಗಬಾರದು' ಎನ್ನುವುದು ಅವಳ ಚಿಂತೆ. ಈ ಮಾತೇನಾದರೂ ಒಳಗಿದ್ದ ಗಂಡಹೆಂಡಿರ ಕಿವಿಗೆ ಬಿದ್ದರೆ ಶಿವರಾಮನ ಮಾತು ಬರೀ ತಮಾಷಿಯದು ಅನಿಸಲಿ ಎನ್ನುವುದು ಇಂಗಿತ. ಅವರಿಗೆ ಕೇಳಿಸಲಿ ಎಂದೇ ಮಾತಾಡುವಂತವನು ಶಿವರಾಮ. ಇಷ್ಟು ವರ್ಷ ಅಣ್ಣನ ಜೊತೆ ಬೆಳೆದ ವೆಂಕಟರಾಮುವಿಗೆ ಇದೆಲ್ಲಾ ಗೊತ್ತಾಗುವುದಿಲ್ಲವೇ? ಆಗೇ ಆಗಿರುತ್ತದೆ. ಭಾವನ ಮನೋಗತ, ಯಜಮಾನಿಕೆಯ ಸ್ವಭಾವ ಅರ್ಥವಾಗುತ್ತಾ ಬಂದಂತೆ ಹಟ ಕಟ್ಟಿದವಳಂತೆ ಕನಕ ಇನ್ನಷ್ಟು ಮಿತಿ ಮೀರಿ ನಡೆದುಕೊಳ್ಳುತ್ತಿದ್ದಾಳಾ? ಅಥವಾ ಹಾಗೆನಿಸುವುದು ತನ್ನ ಯೋಚನಾಧಾಟಿ ಹಿಡಿದ ತಪ್ಪು ಹಾದಿಯಾ? ವೆಂಕಟರಾಮು ಸ್ನಾನಕ್ಕೆ ಬಚ್ಚಲಿಗೆ ಹೋದರೆ ಬೆನ್ನು ತಿಕ್ಕಿಕೊಡಲು ಹಿಂದೆ ಹೋಗುತ್ತಾಳೆ ಕನಕ. ವಾರ, ಹದಿನೈದು ದಿನಗಳಿಗೊಮ್ಮೆ ವೆಂಕಮ್ಮ ಗಂಡುಮಕ್ಕಳ ತಲೆಗೆ ಹರಳೆಣ್ಣೆ ಹಚ್ಚಿ ಎರೆದುಕೊಳ್ಳಲು ಹೇಳುವ ಪರಿಪಾಠ ಇತ್ತು. ಕನಕ ಬಂದ ಮೇಲೆ ಗಂಡನ ತಲೆಗೆ ಎಣ್ಣೆ ಹಚ್ಚುವ ಉದ್ಯೋಗ ಅವಳದ್ದು. 'ಮೆಚ್ಚುಮದ್ದು ತಿಕ್ತಿರೋದು' ಅನ್ನುತ್ತಿದ್ದ ಶಿವರಾಮ. ತನ್ನ ಹೆಂಡತಿ ತನ್ನ ಸೇವೆಯನ್ನು ಹಾಗೇ ಮಾಡಲಿ ಎನ್ನುವ ಗುಪ್ತ ಆಸೆ ಗ್ರಾಸ್ತನಿಗೆ ಇದ್ದಂತಿರಲಿಲ್ಲ. ಇದ್ದಿದ್ದರೆ ಅದನ್ನು ಪೂರೈಸಿಕೊಳ್ಳುವುದು ಕಷ್ಟವೇನಾಗುತ್ತಿರಲಿಲ್ಲ. ಎಲ್ಲಕ್ಕಿಂತ ಹೆಚ್ಚು ಶಿವರಾಮನ ಕಣ್ಣಲ್ಲಿ ಒತ್ತುತ್ತಿದ್ದುದು ಗಂಡಹೆಂಡಿರು ಮಧ್ಯಾಹ್ನದ ಊಟ ಆದ ಮೇಲೆ ಕೋಣೆ ಹೊಕ್ಕು ಬಾಗಿಲು ಹಾಕಿಕೊಂಡು ಮಲಗುತ್ತಿದ್ದುದು. ಹಿರಿಯರು, ಹೇಳಕೇಳುವವರು ಮನೆಯಲ್ಲಿರುವಾಗ ಇದೆಂಥ